during the course of the day, and I will ask the Police people to work up all the information.

Issue of orders for exemption of Stamp Duty on lands below 2½ Acres

† ಶ್ರೀ ಕೆ. ಎಚ್. ಹನುಮೇಗೌಡ.– (ಹಾಸನ)ನಿರ್ಡೂವರೆ ಎಕರೆಗಿಂತ ಕಡಿಮೆ ಇರತಕ್ಕ ಜಮೀನಿನ ಮೇಲೆ ಸಾಲ ತೆಗೆದುಕೋಂದರೆ ಸ್ಟ್ಯಾಂಪ್ ಡ್ಯೂಟಿಯನ್ನು ಎಕ್ಸಮ್ಪ್ಷನ್ ಮಾಡ ಪ ಬಗ್ಗೆ ಮಾನ್ಯ ಮಂತ್ರಿಗಳ ಗಮನವನ್ನು ಸೆಳೆದಿದ್ದೆ. ಆಗ ಅವ್ಕ ಉತ್ತರವನ್ನು ಕೊಟ್ಟಿದ್ದರು. ಆದರೂ ಕೂಡ ಈ ಲಾಗಾಯ್ತು ಆಜ್ಞೆಯನ್ನು ಹೊರಡಿಸಿಲ್ಲ. ಹೀಗಾದರೆ ಸಾಲ ತೆಗೆದುಕೊಳ್ಳಬೇಕಾಗಿರುವ ಬಡ ರೈತರ ಗತಿ ಏನು? ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ೨–೩ ದಿವಸಗಳೊಳಗಾಗಿ ೧೦ ಸಾವಿರ ರೂಪಾಯಿವರೆಗೆ ಎಕ್ಸಮ್ಪ್ಷನ್ ಮಾಡಿ ಆರ್ಡರ್ ಇಶ್ಯೂ ಮಾಡುತ್ತೆ ಎಂದು ಹೇಳಿದ್ದರು. ಈಗಾಗಲೆ ಮೂರಿಯಾದೆ. ಈ ಸಂದರ್ಭದಲ್ಲಿ ರೈತರು ಸಾಲ ತೆಗೆದುಕೊಳ್ಳಬೇಕಾದಿರುವಾಗ ಸ್ಟ್ಯಾಂಪ್ ಡ್ಯೂಟಿ ಎಕ್ಸಮ್ಪ್ಷನ್ ಮಾಡದೆ ಹೋದರೆ ಸಾಲವನ್ನು ತೆಗೆದುಕೊಳ್ಳುವುದಿಲ್ಲ.

ಅಧ್ಯಕ್ಷರು—ಈಗ ಮಾನ್ಯ ಕಂದಾಯ ಸಚಿವರು ಇಲ್ಲ. ಆದ್ದರಿಂದ, ಅವರು ಬಂದಮೇಲೆ ಪ್ರಸ್ತಾಪಿಸಿ.

ಶ್ರೀ ಕೆ. ಎಚ್. ಹನುಮೇಗೌಡ—ಇದಕ್ಕೆ ಮಾನ್ಯ ಸಹಕಾರ ಮಂತ್ರಿಗಳು ಉತ್ತರ ಹೇಳಬೇಕಾಗಿರುವುದು ಅವರು ಅಲ್ಲೇ ಕುಳಿತಿದ್ದಾರೆ, ಮಾನ್ಯ ಕಂದಾಯ ಮಂತ್ರಿಗಳನ್ನು ಕೇಳಿವಾಗ ಇವರ ಮೇಲೆ ಹೇಳಿದರು.

ಅಧ್ಯಕ್ಷರು—ತಮಗೆ ಸಮಾಧಾನವಾಗುವ ರೀತಿಯಲ್ಲಿ ಉತ್ತರ ನೀಡುವಂತೆ ಸರ್ಕಾರದ ಮುಖ್ಯ ಸಚೇತಕರ ಮೂಲಕ ಮಾನ್ಯ ಕಂದಾಯ ಸಚಿವರಿಗೆ ಹೇಳಿ ಕಳುಹಿಸುತ್ತೇನೆ.

ಶ್ರೀ ಎಚ್. ಟಿ. ಕೃಷ್ಣಪ್ಪ—ಈ ವಿಚಾರದಲ್ಲಿ ವಿಳಂಬ ಮಾಡತಕ್ಕದ್ದು ಅಕ್ಷಮ್ಯ. ಒಂದು ದಿವಸ ಸಹ ಬಹಳ ಪವಿತ್ರವಾದುದು.

ಅಧ್ಯಕ್ಷರು—ನಾನು ಈಗಲೇ ಹೇಳಿ ಕಳುಹಿಸುತ್ತೇನೆ.

ಶ್ರೀ ಕೆ. ಎಚ್. ಹನುಮೇಗೌಡ—ಈಗ ಮಾನ್ಯ ಸಹಕಾರ ಮಂತ್ರಿಗಳು ಏನು ಹೇಳುತ್ತಾರೋ ಹೇಳಲಿ.

Leave of Absence to Sri F. S. Patil Grant of

MR. SPEAKER.—I have received telegram from Sri F. S Patil, Member, Legislative Assembly requesting for leave of absence due to ill health from 1st May to 14th May, 1979.

Is it the pleasure of the House that permission be granted to Sri F. S. Patil to remain absent from 1st may to 14th May, 1979.

HON. MEMBERS—Yes.

MR. SPEAKER—Permission to remain absent is granted.

LEAVE OF ABSENCE OF MR. S. W. J. MARLEY

MR. SPEAKER—I have also received a letter from Mr. Marley requesting for leave of absence from current sittings of Legislative Assembly due to ill-health.

Is it the pleasure of the House to grant leave of absence for Mr. S.W.J. Marley till the end of the current sittings of the Legislative Assembly.

Hon'ble Members—Yes.

MR. SPEAKER – Permission to remain absent is granted.

CALLING ATTENTION TO A MATTERS OF URGENT PUBLIC IMPORTANCE

ಅಧ್ಯಕ್ಷರು – ಮಾನ್ಯ ಪ್ರಭಾಕರ್ ತೇಲ್ಕರ್‌ರವರ ಗಮನ ಸೆಳೆಯುವ ಸೂಚನೆಯನ್ನು ಬೇರೆ ಒಂದು ದಿವಸ ತೆಗೆದುಕೊಳ್ಳಲಾಗುವುದು.

ಶ್ರೀ ಮಲ್ಲಿಕಾರ್ಜುನ ಖರ್ಗೆ ಮಾನ್ಯ ಪ್ರಭಾಕರ್ ತೆಲ್ಕರ್ ಮತ್ತು ನಾನು ಕೂಡಿ ಕಳುಹಿಸಿರುವುದರಿಂದ ಅವರು ಗೈರು ಹಾಜರಾಗಿದ್ದರೆ ನಾನು ಪ್ರಸ್ತಾಪಿಸುತ್ತೇನೆ.

ಅಧ್ಯಕ್ಷರು – ಈಗ ಮಾನ್ಯ ಮಂತ್ರಿಗಳು ಇಲ್ಲದಿರುವುದರಿಂದ ಇನ್ನೊಂದು ದಿವಸ ತೆಗೆದುಕೊಳ್ಳುತ್ತೇನೆ.

re : Providing free education facilities to students whose family income is below Rs. 3600 P A.

ಶ್ರೀ ಪಿ ರಾಮಯ್ಯ ವ್ (ಮಲ್ಲೇಶ್ವರಂ)—ವಾರ್ಷಿಕ ವರಮಾನ ೧೮,೦೦೦ ರೂಪಾಯಿಗಳಿಗಿಂತ ಕಡಿಮೆ ಇರುವ ಹಿಂದುಳಿದ ಕುಟುಂಬಗಳ ವಿದ್ಯಾರ್ಥಿಗಳಿಗೆ ನೀಡಿದ್ದ ಸೌಲಭ್ಯವನ್ನು ಮುಂದಿನ ಶಿಕ್ಷಣ ವರ್ಷದಿಂದ ಹಿಂತೆಗೆದುಕೊಂಡು ಅದರ ಸ್ಥಾನದಲ್ಲಿ ಯಾವ ಕೋಮಿನ ಬೇಧವೂ ಇಲ್ಲದೆ ೩,೬೦೦ ರೂಪಾಯಿಗಳಿಗಿಂತ ಕಡಿಮೆ ವರಮಾನವುಳ್ಳ ಎಲ್ಲ ಕುಟುಂಬಗಳ ವಿದ್ಯಾರ್ಥಿಗಳಿಗೂ ಉಚಿತ ಶಿಕ್ಷಣ ಸೌಲಭ್ಯ ನೀಡುವ ಆಜ್ಞೆಯಿಂದ ಉಂಟಾದ ಕಳವಳದ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಲ್.ಜಿ. ಹಾವನೂರ್ (ಕಾನೂನು ಹಾಗೂ ಸಮಾಜ ಕಲ್ಯಾಣ ಶಾಖೆಗಳ ಮಂತ್ರಿಗಳು)—ಆ ಬಗ್ಗೆ ನನ್ನ ಹೇಳಿಕೆ ಈ ರೀತಿ ಇದೆ :—

೨೭-೩-೧೯೭೯ನೇ ದಿನಾಂಕದ ಎಸ್ ಡಬ್ಲ್ಯೂ.ಎಲ್. ೨೭೩ ಬಿಸಿಎ ೭೮ನೇ ಆಜ್ಞೆಯೊಂದನ್ನು ಹೊರಡಿಸಿ, ಸರಕಾರದವರು ಯಾವ ಕೋಮಿನ ಭೇದವೂ ಇಲ್ಲದೆ ೩೬೦೦-೦೦ ರೂಪಾಯಿಗಳಿಗಿಂತ ಕಡಿಮೆ ವಾರ್ಷಿಕ ವರಮಾನ ಇರುವ ಎಲ್ಲ ಕುಟುಂಬಗಳ ವಿದ್ಯಾರ್ಥಿಗಳಿಗೂ ವ್ಯಾಸಂಗ ಮತ್ತು ಪ್ರಯೋಗಾಲಯ ಶುಲ್ಕಗಳನ್ನು ಮನ್ನಾ ಮಾಡಿದ್ದಾರೆ.

೨. ಈ ಆಜ್ಞೆಯ ಅನುಸಾರ ೧೯೭೯-೮೦ನೇ ಶಿಕ್ಷಣ ವರ್ಷದಿಂದ, ವಾರ್ಷಿಕ ವರಮಾನ ೩,೬೦೦-೦೦ ರೂಪಾಯಿಗಳಿಗೂ ಕಡಿಮೆ ಇರುವ ಕುಟುಂಬದ ವಿದ್ಯಾರ್ಥಿಗಳು, ಇದುವರೆವಿಗೂ ಕೊಡಬೇಕಾಗಿದ್ದ ವ್ಯಾಸಂಗ ಶುಲ್ಕ ಮತ್ತು ಪ್ರಯೋಗಾಲಯ ಶುಲ್ಕ ಇವೆರಡನ್ನೂ, ಇನ್ನು ಮುಂದೆ ಕೊಡಬೇಕಾಗಿಲ್ಲ. ಈ ಸೌಲಭ್ಯ ಯಾವ ಕೋಮಿನ ಬೇಧವೂ ಇಲ್ಲದೆ ರಾಜ್ಯದ ಎಲ್ಲ ವಿದ್ಯಾರ್ಥಿಗಳಿಗೂ ಲಭ್ಯವಾಗುತ್ತದೆ.

೩. ೩,೬೦೦-೦೦ ರೂಪಾಯಿಗಳ ವಾರ್ಷಿಕ ಆದಾಯದ ಮಿತಿಕೆ ಮೇಲ್ ಶುಲ್ಕ ರಿಯಾಯಿತಿಗಳಿಗೆ ಮಾತ್ರ ಅನ್ವಯವಾಗುವುದು. ವೃತ್ತಿ ಶಿಕ್ಷಣ ಮತ್ತು ತಾಂತ್ರಿಕ ಶಾಲಾ ಕಾಲೇಜುಗಳ ಪ್ರವೇಶದಲ್ಲಿ ವಿಶೇಷವಾಗಿಡಲಾದ ಸ್ಥಾನಗಳಿಗೆ ಭರ್ತಿ ಮತ್ತು ಪರಭಾರಿ ಸೇವೆಗಳಲ್ಲಿನ ವಿಶೇಷ ಸ್ಥಾನಗಳ ಭರ್ತಿ, ಈ ಬಗ್ಗೆ ಹೊರಡಿಸಿರುವ ಆಜ್ಞೆಗಳು ಇನ್ನು ಮುಂದೆಯೂ ಮುಂದುವರೆಯುವುವು.

೪. ಈ ಆಜ್ಞೆಯ ಅನುಸಾರ ಲಭ್ಯವಾಗುವ ಸೌಲಭ್ಯಗಳನ್ನು ವಿತರಣೆ ಮಾಡುವಲ್ಲಿ ಅನುಸರಿಸಬೇಕಾದ ವಿಧಿ, ವಿಧಾನಗಳ ಬಗ್ಗೆ ಪ್ರತ್ಯೇಕವಾದ ನಿಯಮಾವಳಿಗಳನ್ನು ಸಹ ರೂಪಿಸಲಾಗಿರುತ್ತದೆ.